**ದಿನಾಂಕಃ 07.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

**11**. ನಮ್ಮ ಅಂಗಡಿಯಲ್ಲಿ ತಿಂಗಳಿಗೆ 5 ಲಕ್ಷ ರೂ. ವ್ಯಾಪಾರವಾಗುತ್ತದೆ. ಸಾಲದ ಆಧಾರದ ಮೇಲೆ ಎಷ್ಟು ವ್ಯಾಪಾರ ಮಾಡುತ್ತೀರಿ ಎಂದರೆ ದಾಖಲೆಯನ್ನು ನೋಡಿ ಹೇಳಬೇಕಾಗುತ್ತದೆ ಎಂದು ನುಡಿಯುತ್ತಾರೆ. ಆರೋಪಿಗೆ ರೂ.1,26,500/-ಗಳ ಸರಕುಗಳನ್ನು ಸಾಲದ ಆಧಾರದ ಮೇಲೆ ಸರಬರಾಜು ಮಾಡಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸುತ್ತೀರಾ ಎಂದರೆ ಸಾಕ್ಷಿಯು ಬಿಲ್ಲುಗಳನ್ನು ಆರೋಪಿಗೆ ನೀಡಿರುತ್ತೇನೆ, ಒಂದು ವೇಳೆ ನನ್ನ ಬಳಿ ಇದ್ದಲ್ಲಿ ಹಾಜರುಪಡಿಸುತ್ತೇನೆ. ನೀವು ಯಾವ ಕಟ್ಟಡಕ್ಕೆ ಸರಕುಗಳನ್ನು ಸರಬರಾಜು ಮಾಡಿರುತ್ತೀನಿ ಎಂದು ಹೇಳಿರುತ್ತೀರಿ ಆ ಕಟ್ಟಡದ ಮಾಲೀಕರನ್ನಾಗಲೀ ಅಥವಾ ಸರಕುಗಳನ್ನು ಪಡೆದುಕೊಂಡವರನ್ನಾಗಲೀ ಸಾಕ್ಷಿ ಮಾಡಿಸಲು ಸಾಧ್ಯವೇ ಎಂದರೆ ಸಾಕ್ಷಿಯು ಆರೋಪಿ ಹೇಳಿದಂತಹ ಸ್ಥಳದಲ್ಲಿ ಅವರು ಹೇಳಿದಂತಹ ವ್ಯಕ್ತಿಗೆ ಸರಕುಗಳನ್ನು ಸರಬರಾಜು ಮಾಡಿದ್ದೆನು, ಈಗ ಅವರನ್ನು ಸಾಕ್ಷಿ ಮಾಡಿಸಲು ಸಾಧ್ಯವಾಗುವುದಿಲ್ಲ ಎಂದು ನುಡಿಯುತ್ತಾರೆ. ಆ ಕಟ್ಟಡದ ಮಾಲೀಕರು ಯಾರು ಎಂದು ನನಗೆ ಗೊತ್ತಿಲ್ಲ. ಆರೋಪಿ ನಿಮಗೆ ಎಷ್ಟು ಚೆಕ್ಕು ನೀಡಿದ್ದರು ಎಂದರೆ ಸಾಕ್ಷಿಯು ನಿ.ಪಿ.1 ರ ಚೆಕ್ಕನ್ನು ಮಾತ್ರ ನೀಡಿದ್ದರು ಎಂದು ನುಡಿಯುತ್ತಾರೆ.

**12.** ನಿ.ಪಿ.6 ರ ಪುಟ ಸಂಖ್ಯೆ 17 ರಲ್ಲಿ ಕೊನೆಯ ಮೆಸೇಜ್‌ನಲ್ಲಿ Next cheque interest ಹಾಕುತ್ತೇನೆ ಮೇಡಂ ಎಂದು ಮೆಸೇಜ್ ಕಳುಹಿಸಿರುತ್ತೀರಿ ಎಂದರೆ ಸಾಕ್ಷಿಯು ನನ್ನ ಅಭಿಪ್ರಾಯದಲ್ಲಿ ನೀವು ಇದೇ ರೀತಿ ಹಣ ನೀಡಲು ಸತಾಯಿಸಿದ್ದಲ್ಲಿ ನಾನು next ಚೆಕ್ಕನ್ನು

ಹಾಜರುಪಡಿಸುತ್ತೇನೆ ಎಂದು ಮೆಸೇಜ್ ಹಾಕಿದ್ದೇನೆ ಎಂದು ನುಡಿಯುತ್ತಾರೆ. ನೀವು ಸದರಿ ಪ್ರಕರಣದ ಚೆಕ್ಕನ್ನು ಬ್ಯಾಂಕಿಗೆ ಹಾಜರುಪಡಿಸಿದ ನಂತರ ನಿ.ಪಿ.6 ರ 17 ನೇ ಪುಟದಲ್ಲಿನ ರೀತ್ಯ ಮೆಸೇಜ್ ಕಳುಹಿಸಿರುತ್ತೀರಿ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ.

**13.** ದಿ.01.04.2019 ರಂದು ವಿಜಯಾ ಬ್ಯಾಂಕ್ ಬ್ಯಾಂಕ್ ಅಫ್ ಬರೋಡಾದ ಜೊತೆ ವಿಲೀನಗೊಂಡಿರುತ್ತದೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ನಿ.ಪಿ.2 ರ ದಾಖಲೆಯಲ್ಲಿ ಬ್ಯಾಂಕಿನ ಸೀಲು ಹಾಗೂ ಸಹಿ ಇರುವುದಿಲ್ಲ ಎಂದರೆ ಬ್ಯಾಂಕಿನವರು ನೀಡಿದ್ದನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ನಿ.ಪಿ.2 ಅನ್ನು ನೀಡಿದಂತಹ ಬ್ಯಾಂಕಿನ ಮ್ಯಾನೇಜರ್ ಅನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ಸಾಕ್ಷಿ ನುಡಿಸುತ್ತೀರಾ ಎಂದರೆ ಅವರು ನ್ಯಾಯಾಲಯಕ್ಕೆ ಹಾಜರಾಗುತ್ತಾರೋ ಇಲ್ಲವೋ ಎಂದು ನನಗೆ ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ. ನಿ.ಪಿ.3 ರ ನೋಟೀಸಿನಲ್ಲಿ ನಮೂದಿಸಿರುವ ವಿಳಾಸದಲ್ಲಿ ಆರೋಪಿ ವಾಸವಾಗಿರಲಿಲ್ಲ, ಆ ಕಾರಣ ನೋಟೀಸಿಗೆ ಪ್ರತ್ಯುತ್ತರ ನೀಡಿರುವುದಿಲ್ಲ ಎಂದರೆ ಸಾಕ್ಷಿಯು ಆರೋಪಿ ಎಲ್ಲಿ ವಾಸವಾಗಿರುತ್ತಾರೋ ನನಗೆ ಗೊತ್ತಿಲ್ಲ, ಆರೋಪಿ ನೀಡಿದಂತಹ ವಿಳಾಸಕ್ಕೆ ನಾನು ನೋಟೀಸು ನೀಡಿರುತ್ತೇನೆ. ನಿ.ಪಿ.3 ರಲ್ಲಿ ನಮೂದಿಸಿರುವ ವಿಳಾಸದ ಕಟ್ಟಡದ ಮಾಲೀಕರು ಯಾರು ಎಂದು ನಿಮಗೆ ತಿಳಿದಿದೆಯೇ ಎಂದರೆ ನನಗೆ ಗೊತ್ತಿಲ್ಲ. ನಿ.ಪಿ.5 ಅನ್ನು ಪ್ರಕರಣಕ್ಕಾಗಿ ಸೃಷ್ಟಿ ಮಾಡಿ ಹಾಜರುಪಡಿಸಿದ್ದೀರಿ ಎಂದರೆ ಸರಿಯಲ್ಲ. ನಿ.ಪಿ.1 ಹಾಗೂ ನಿ.ಡಿ.1 ಚೆಕ್ಕುಗಳನ್ನು ಆರೋಪಿ ಅವರ ಕಟ್ಟಡದ ಮಾಲೀಕರಾದ ಮುರಳಿಕೃಷ್ಣರವರಿಗೆ ನೀಡಿದ್ದು, ಅದನ್ನು ನೀವು

ದುರುಪಯೋಗಪಡಿಸಿಕೊಂಡು ಆರೋಪಿಯ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.